IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಮಲೆಗಳಲ್ಲಿ ಮದುಮಗಳು ಮತ್ತು ಕೃಷಿ ಜಮಿನ್ದಾರಿ ಪದ್ಧತಿ

**ಮಹಂತೇಶ. ಎಂ**

**ಸಂಶೋಧನಾರ್ಥಿ**

**ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ, ಬೆಂಗಳೂರು**

**'ಮಲೆಗಳಲ್ಲಿ ಮದುಮಗಳು'** ಕನ್ನಡ ಸಾಹಿತ್ಯ ಲೋಕಕ್ಕೆ ಮಾತ್ರವಲ್ಲದೇ ಆಧುನಿಕ ಭಾರತೀಯ ಸಾಹಿತ್ಯ ಲೋಕಕ್ಕೆ ಬಹಳ ಮಹತ್ವದ ಕೃತಿ. ಕೇವಲ ಒಂದು ಆಯಾಮಕ್ಕೆ ಸೀಮಿತವಾಗದ ಈ ಕೃತಿ ಹಲವು ಆಯಾಮಕ್ಕೆ ತೆರೆದುಕೊಳ್ಳುವಂತದ್ದು, 'ಮಲೆಗಳಲ್ಲಿ ಮದುಮಗಳು' ಕೃತಿ ಸಾಹಿತ್ಯ ಜಗತ್ತಿಗೆ ಬಂದ ನಂತರ ಹೊಸ ತಲೆಮಾರಿನ ಬರೆವಣಿಗೆಯ ಕ್ರಮ, ವಿನ್ಯಾಸ ಹೊಸ ಸಾಧ್ಯತೆಗಳನ್ನು ಹುಟ್ಟುಹಾಕಲು ಕಾರಣೀಭೂತವಾಗಿವೆ. ಇತಿಹಾಸದಲ್ಲಿ ಜರುಗಿದ ಸಾಮಾಜಿಕ ಒತ್ತಡಗಳನ್ನು ಎಲ್ಲಾ ಕಾಲಕ್ಕೂ ಕೊಂಡೊಯ್ದು ಸದ್ಯದ ಸಮಾಜದ ಒತ್ತಡಗಳೊಂದಿಗೆ ತುಲಾನಾತ್ಮಕವಾಗಿ ಅಭ್ಯಸಿಸಿ ನೋಡುವ, ಕಾಲದ ಗಡಿಯಾರದಂತೆ ಸದಾ ಉರುಳುವ ಹೊಸತನ್ನು ಮರುಸೃಷ್ಟಿಸುವ ಈ ಕೃತಿಯು ಭಾರತೀಯ ಸಾಹಿತ್ಯ ಲೋಕದಲ್ಲಿ ಸದಾ ಚಲನಶೀಲತೆಯನ್ನು ಹೊಂದಿದೆ.

ಈ ಕಾದಂಬರಿಯನ್ನು ಸ್ತ್ರೀ ಸಮಾನತೆ, ಧಾರ್ಮಿಕತೆ, ಜಾತೀಯತೆ, ಆಧ್ಯಾತ್ಮಿಕತೆ, ಆರ್ಥಿಕತೆ, ಸಾಮಾಜಿಕತೆ, ರಾಜಕೀಯತೆ ಹೀಗೆ ಇನ್ನೂ ಹತ್ತು ಹಲವು ವಿಭಿನ್ನ ಆಯಾಮಗಳಿಂದ ಎದುರುಗೊಳ್ಳಬಹುದು. ಕನ್ನಡ ಸಾಹಿತ್ಯವೆಂದರೆ, ಕೃತಿಯ ನಿರೂಪಣೆ, ಶೈಲಿ, ವಿನ್ಯಾಸ, ಕಾಲದ ಧರ್ಮ, ಕೃತಿಕಾರನ ಪ್ರೇರಣೆ ಇಂತಿಷ್ಟೆ ಅಲ್ಲದೇ ಅದರಾಚೆಗಿನ ಮಾನವನ ವಾಸ್ತವ ಬದುಕನ್ನು ನೋಡುವಂತದ್ದು. ಹಾಗಾಗಿ ನಾನಿಲ್ಲಿ ಬೆವರು ಸಂಸ್ಕೃತಿಯ ಭಾಗವಾದ ಕೃಷಿಯ ಹಿನ್ನೆಲೆಯಲ್ಲಿ ಎಲ್ಲಾ ಸಮುದಾಯಗಳ ಮೇಲೆ ಆದಂತಹ ಜಮೀನ್ದಾರಿ ಪ್ರಭಾವದ ಬಗ್ಗೆ ಗಮನ ಹರಿಸಿದ್ದೇನೆ.

ಕುವೆಂಪು ಅವರ ಹಳೆಯ ರಚನೆಗಳ ಮುಂದೆ ಮಲೆಗಳಲ್ಲಿ ಮದುಮಗಳು ಹೆಬ್ಬಂಡೆಯಾಗಿ ಬಹಳ ಹಿರಿದಾಗಿ ಕಾಣುತ್ತದೆ. ಅದು ಸಾಂಸ್ಕೃತಿಕವಾಗಿಯೂ ಮತ್ತು ಸಾಹಿತ್ಯಿಕವಾಗಿಯೂ ಪ್ರಾಮುಖ್ಯತೆಯನ್ನು ಪಡೆದಿದೆ. ಕೃಷಿ ಹಿನ್ನೆಲೆಯಲ್ಲಿ ಜಮೀನ್ದಾರಿ ಮತ್ತು ಊಳಿಗಮಾನ್ಯ ವ್ಯವಸ್ಥೆಗಳನ್ನು ಕಂಡ ಕುವೆಂಪು ಅವರಿಗೆ ಅದನ್ನು ದಾಖಲಿಸಿ ಸಹೃದಯರನ್ನು ವಿಮರ್ಶೆಗೆ ಒಳಪಡಿಸುವ ಹೊಣೆಯನ್ನು ಕೃತಿಯು ಹೊತ್ತಿರುವುದು ಬಹಳ ಸ್ಪಷ್ಟವಾಗಿದೆ. ಮದುಮಗಳು ಕಾದಂಬರಿಯಲ್ಲಿ ಕುವೆಂಪುರವರು

ಎತ್ತಿರುವ ಪ್ರಶ್ನೆಗಳು ಹಿಂದಿನ ಸಹಸ್ರಮಾನಕ್ಕೆ ಮಾತ್ರ ಸೀಮಿತವಾಗದೇ ಇಂದಿನ ಬಂಡವಾಳ ಶಾಹಿಗಳ ಮತ್ತು ಖಾಸಗೀಕರಣದ ಕೃಷಿಯ ಒತ್ತಡಗಳಿರುವ ಕಾಲಕ್ಕೂ ಹೊಂದಿಕೊಳ್ಳುತ್ತದೆ.

'ಉಳದೆ ಬಿತ್ತದೆ, ಬೆಳೆಯದೆ, ಪೈರು ಕೊಯ್ಲಿಗೆ ಬರುವುದಿಲ್ಲ. ಬೆವರು ಸುರಿಸದೇ, ಕೈ ಸೇರುವುದಿಲ್ಲ' ಎಂಬ ಕುವೆಂಪುರವರ ಮಾತಿನಂತೆ, ಕೃಷಿಯು ಶ್ರಮ ಸಂಸ್ಕೃತಿಯ ಬಹಳ ಪ್ರಮುಖವಾದ ಭಾಗ. ನಿಜವಾದ ಶ್ರಮದಲ್ಲಿ ತೊಡಗಿರುವವರು ಯಾರು? ಯಾರ ಕೈಯಲ್ಲಿ ಅಧಿಕಾರ ಮತ್ತು ಮಾಲೀಕತ್ವದ ಲಗಾಮು ಇದೆ? ಶೋಷಣೆಗೆ ಒಳಗಾದವರು ಯಾರು? ಎಂಬಿತ್ಯಾದಿ ಕೃಷಿಯ ಜಮಿನ್ದಾರಿ ಕ್ರೌರ್ಯವನ್ನು ಮದುಮಗಳು ಕಾದಂಬರಿಯಲ್ಲಿ ಕುವೆಂಪುರವರು ಹೇಗೆ ಅಭಿವ್ಯಕ್ತಿ ಪಡಿಸಿದ್ದಾರೆ ಎಂಬುದು ಈ ಪ್ರಬಂಧದ ಮೂಲದೃಷ್ಟಿ.

ಕೃಷಿ ಸಂಬಂಧಿಯಾಗಿ ಕುವೆಂಪು ಎತ್ತಿರುವಂತ ಪ್ರಶ್ನೆಗಳು ತುಂಬಾ ಮುಖ್ಯವಾಗುತ್ತವೆ. ಮದುಮಗಳು ಕಾದಂಬರಿಯಲ್ಲಿ ಪ್ರಕೃತಿಯ ಮೇಲೆ ಮತ್ತು ಸಾಂಪ್ರದಾಯಿಕ ಕೃಷಿಯ ಪದ್ಧತಿಯ ಮೇಲೆ ಸಾಮಾಜಿಕ ಸ್ತರದ ಬದುಕು ಹೇಗೆಲ್ಲ ಪರಿಣಾಮ ಬೀರಿದೆ ಎಂಬುದನ್ನು ತಿಳಿಸುತ್ತಾರೆ. ಊಳಿಗಮಾನ್ಯ ಹಾಗೂ ಪುರೋಹಿತಶಾಹಿ ಜಮೀನ್ದಾರರ ದಬ್ಬಾಳಿಕೆಯನ್ನು ವರ್ಣ ವ್ಯವಸ್ಥೆಯ ತಳಮಟ್ಟದಲ್ಲಿರುವ ಶೂದ್ರಾತಿಶೂದ್ರರು ಮತ್ತು ವರ್ಣ ವ್ಯವಸ್ಥೆಯಿಂದ ಹೊರಗಿಡುವ ಅಸ್ಪೃಶ್ಯರು ಹಾಗೂ ಸ್ತ್ರೀ ಸಮುದಾಯಗಳ ಮೇಲೆ ಶೋಷಿಸುವ ಹತ್ತು ಹಲವು ಆಯಾಮಗಳನ್ನು ದಾಖಲಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದಂತಹ ಮಂಜಭಟ್ಟರು ಜನಿವಾರ, ಉಟ್ಟ ಪಾಣಿಪಂಚೆ, ಕೈಯಲೊಂದು ಪಂಚಪಾತ್ರೆಯನ್ನಷ್ಟೇ ಹಿಡಿದುಕೊಂಡು ಕಲ್ಲೂರಿಗೆ ಬಂದರು. ಅವರ ಜಾತಿಯ ಮೇಲಿರುವ ಭಯ ಮಿಶ್ರಿತ ಗೌರವವನ್ನು ಸರಕಾಗಿ ಬಳಸಿಕೊಂಡು ಮಂದಬುದ್ಧಿಯ ಗೌಡರು, ನಾಯಕರು, ಹೆಗ್ಗಡೆಯವರಿಗೆ ಸಾಲ ಕೊಟ್ಟು ಜಮೀನನ್ನು ಬರೆಸಿಕೊಂಡೊ ಅಥವಾ ಖಾಲಿ ಪತ್ರದೊಳಗೆ ಹೆಬ್ಬೆಟ್ಟನ್ನು ಒತ್ತಿಸಿಕೊಂಡೋ ಕೃಷಿ ಭೂಮಿಯನ್ನೆಲ್ಲ ಲಪಟಾಯಿಸಿ ಕೊನೆಗೆ ಕಲ್ಲೂರಿನ ಸುತ್ತಮುತ್ತ ಊರುಗಳಿಗೆಲ್ಲ 'ಸಾಹುಕಾರ ಮಂಜಪ್ಪಭಟ್ಟ'ರು! ಎಂದು ಪ್ರಸಿದ್ಧಿಯನ್ನು ಪಡೆದುಕೊಂಡಿರುತ್ತಾರೆ. ಇದಿಷ್ಟೇ ಅಲ್ಲದೇ ಅಲ್ಲಿರುವ ಕರಿಮೀನ್ ಸಾಬಿ, ಪುಡಿಸಾಬಿ, ಲುಂಗಿಸಾಬಿ, ಇಜಾರದ ಸಾಬರನ್ನು 'ವಸೂಲಿ' ಸಾಬರನ್ನಾಗಿ ನೇಮಿಸಿಕೊಂಡಿದ್ದ ಮಂಜಭಟ್ಟರು ಸಾಲ ಪಡೆದುಕೊಂಡವರ ಬಳಿ ಬಡ್ಡಿಯನ್ನು, ಅಸಲನ್ನು ವಸೂಲಿ ಮಾಡಲು ನೇಮಿಸಿಕೊಂಡಿರುತ್ತಾರೆ. ವಸೂಲಿ ಸಾಬರ ಮೃಗೀಯ ಪ್ರವೃತ್ತಿ ಮತ್ತು ಮಂಜಭಟ್ಟರ ಚಾಣಾಕ್ಷತನದ ಸಾಲ ವ್ಯವಹಾರಕ್ಕೂ ಸಿಕ್ಕ ಕೃಷಿ ಭೂಮಿ ಮಾಲೀಕರು, ಇವರು ರಚಿಸಿದ ವ್ಯೂಹದಿಂದ ಹೊರ ಬರಲಾಗದೆ ತಮ್ಮ ಜಮೀನನ್ನು ಕಳೆದುಕೊಳ್ಳುತ್ತಾರೆ.

ಇದರ ಜೊತೆಜೊತೆಗೆ ವಸೂಲಿ ಸಾಬರ ಒಳ ವ್ಯವಹಾರದಿಂದ ಮಂಜಭಟ್ಟರು ವಿಧಿಸಿದ್ದ ಬಡ್ಡಿಗಿಂತ ಹೆಚ್ಚು ಬಡ್ಡಿಯನ್ನೊ ಅಥವಾ ಬಡ್ಡಿಯ ಜೊತೆಗೆ ಇನಾಮಾಗಿ ಜಮೀನಿನಲ್ಲಿ ಬೆಳೆದ ಬೆಳೆಯನ್ನು ದಬ್ಬಾಳಿಕೆಯಿಂದ ಪಡೆದುಕೊಳ್ಳುತ್ತಿದ್ದರು. ಇದು ದೌರ್ಜನ್ಯದ ಒಳವರ್ತುಲ ಹಾಗೂ ಆಳವಾದ ದಬ್ಬಾಳಿಕೆಯ ವಿಸ್ತೃತತೆಯನ್ನು ವಿವರಿಸುತ್ತದೆ. ಹೀಗೆ ಜನ ಇದರಿಂದ ಹೆಚ್ಚು ದೌರ್ಜನ್ಯಕ್ಕೆ ಒಳಗಾಗುತ್ತಿದ್ದರು ಈ ರೀತಿ ದ್ರವ್ಯದ ಮತ್ತು ಕೃಷಿ ಭೂಮಿಯ ಹರಿವು ಏಕಮುಖವಾಗಿ ಮಂಜಭಟ್ಟರಂತಹ ಬುದ್ದಿವಂತ ವೈದಿಕಶಾಹಿ ಮಡಿವಂತರ ಕಡೆಗೆ ಹರಿಯುತ್ತಿದ್ದುದರ ಬಗ್ಗೆಯೂ, ಈ ವೈದಿಕಶಾಹಿಯ ಜನ ಜಮೀನ್ದಾರರಾಗಿ ಬೆಳೆದ ನಂತರ ಶೂದ್ರರನ್ನು ನಡೆಸಿಕೊಳ್ಳುತ್ತಿದ್ದ ರೀತಿ ಶೋಚನೀಯ.

ಕಾದಂಬರಿಯಲ್ಲೇ ಬಂದಿರುವ ಹಾಗೆ ಶೂದ್ರರನ್ನು ಮನೆಯ ಹೊರ ಜಗಲಿಯಲ್ಲಿ ನೆಲದ ಮೇಲೆ ಕೂರಿಸಿಯೂ, ಅಸ್ಪೃಶ್ಯರನ್ನು ಹಜಾರದ ಒಳಗೆ ಸೇರಿಸದೆ ಮನೆಯ ಹೊರಗೆ ನಿಲ್ಲಿಸಿ ವ್ಯವಹರಿಸುವುದನ್ನು ಇಲ್ಲಿ ಗಮನಿಸಬಹುದು.

ಇದಕ್ಕೆ ಇನ್ನೊಂದು ಉದಾಹರಣೆಯೆಂದರೆ, ಮಂಜಭಟ್ಟರ ಬಳಿ ಸಾಲಪಡೆದು ದಿವಾಳಿಯ ಹಂತಕ್ಕೆ ಚಲಿಸುತ್ತಿದ್ದ ವೆಂಕಟಪ್ಪನಾಯಕನ ಜೊತೆ ಮೊದ ಮೊದಲು 'ಏನು ವೆಂಕಟಪ್ಪನಾಯಕರೆ? ಎಂದು ಸಂಬೋಧಿಸುತ್ತಿದ್ದವರು ಬರಬರುತ್ತಾ ಏನು ವೆಂಕಟಣ್ಣ? ಎಂದು ಸಲಿಗೆಯಿಂದ ಕರೆಯುವಂತಾಗಿ ಈಗ ಏನು ಬಂದೆಯೋ ಎಂಕ್ಟ?' ಎಂದು ಕರೆಯುವುದರೊಂದಿಗೆ ಯಜಮಾನ್ಯ ಅಧಿಕಾರವನ್ನು ಹೀಗೆ ಎಲ್ಲರ ಮೇಲೆಯೂ ವಿಸ್ತರಿಸುತ್ತ ತನ್ನ ಆಸ್ತಿಯನ್ನೂ ವಿಸ್ತರಿಸುತ್ತ ಹಿಗ್ಗಿಸುತ್ತ ಬೆಳೆಯುವ ವೈದಿಕಶಾಹಿಗಳ ನೈತಿಕ ದಬ್ಬಾಳಿಕೆಯನ್ನು ಇಲ್ಲಿ ಗಮನಿಸಬಹುದು. ಈಗ ಪ್ರಸ್ತುತ ಇಪ್ಪತ್ತೊಂದನೇ ಸಹಸ್ರಮಾನದಲ್ಲೂ ಇದೇ ರೀತಿಯ ಜಮೀನ್ದಾರಿ ತನಗಳ ಕರಿ ನೆರಳು ವಿವಿಧ ವಿನ್ಯಾಸ–ಸ್ವರೂಪಗಳಲ್ಲಿ ಕವಲುಗಳಾಗಿ ಬಡವರನ್ನು ತುಳತಕ್ಕೆ ಒಳಗಾಗಿರುವವರನ್ನು ಕೈಗಾರಿಕೆ ಹಾಗೂ ಖಾಸಗೀಕರಣದ ಹೆಸರಿನಲ್ಲಿ ಬದಲಾಯಿಸಲಾಗುತ್ತಿರುವ ಸಂಸ್ಕೃತಿಯ ಬಾಹುಳ್ಯವನ್ನು ಸೂಕ್ಷ್ಮವಾಗಿ ಗಮನಿಸಬಹುದು.

ಕೂಲಿ ಆಳುಗಳಾಗಿದ್ದ ತಳ ಸಮುದಾಯದವರಿಗೆ ಕೈ ಸಾಲಗಳಂತಹ ಸಾಲಗಳನ್ನು ನೀಡುವ ಭಟ್ಟರು, ಗೌಡರು, ನಾಯಕರು, ಹೆಗ್ಗಡೆಯವರು ತಳಸಮುದಾಯದವರು ತಲೆಮಾರು ಕಳೆದರೂ ಎಂದೂ ಸಹ ಸಾಲದ ಸುಳಿಯಿಂದ ಹೊರಬರಲಾಗದಂತೆ ಚಕ್ರವ್ಯೂಹವನ್ನು ನಿರ್ಮಿಸಿ ಜೀತದಾಳುಗಳನ್ನಾಗಿ ದುಡಿಸಿಕೊಳ್ಳುತ್ತಿದ್ದರಷ್ಟೇ ಅಲ್ಲದೆ ಸಣ್ಣ ತಪ್ಪುಗಳಿಗೂ 'ವಸೂಲಿ' ಸಾಬರಿಂದ 'ಹೊನ್ನಾಳಿ' ಹೊಡೆತವನ್ನು ಹೊಡೆಸುತ್ತಿದ್ದರು. ಅದು ಹೇಗೆಂದರೆ, ಮರಕ್ಕೆ ಕಟ್ಟಿಹಾಕಿ ಕುಂಡೆಯ ಮೇಲೆ ಹುಣಸೇ ಮರದ ಹಸಿ ಕಡ್ಡಿಯಿಂದ ಹೊಡೆಯುತ್ತಿದ್ದರು. ಹೊಡೆದ ಹೊಡೆತಕ್ಕೆ ಚಡ್ಡಿ ಬಟ್ಟೆಯೆಲ್ಲಾ ರಕ್ತಮಯವಾಗಿ ಹೋಗುತ್ತಿತ್ತು. ಒಮ್ಮೆ ಗುತ್ತಿಯೊಂದಿಗೆ ಬೆಟ್ಟಳ್ಳಿ ದೊಡ್ಡ ಬೀರನ ಮಗಳು ತಿಮ್ಮಿ ಓಡಿಹೋಗಿದ್ದಾಗ, ತಿಮ್ಮಿಯ ಅಣ್ಣನಾದ ಸಣ್ಣಬೀರನೇ ತಿಮ್ಮಿಯನ್ನು ಬಚ್ಚಿಟ್ಟಿದ್ದಾನೆ ಎಂದು ಶಂಕಿಸಿ 'ಹೊನ್ನಾಳಿ' ಹೊಡೆತ ಪ್ರಯೋಗಿಸುವಾಗ ಸಣ್ಣಬೀರನ ತಾಯಿ ಅಡ್ಡ ಬಂದು ತಿಮ್ಮಿಯನ್ನು ಹುಡುಕಿಕೊಡುವ ಜವಾಬ್ದಾರಿಯನ್ನು ಹೊತ್ತ ನಂತರವೇ ಸಣ್ಣಬೀರನನ್ನು ಬಂಧನಮುಕ್ತಿಗೊಳಿಸಿದ್ದನ್ನು ಗಮನಿಸಬಹುದು.

ಮಹಿಳೆಯರನ್ನು ಸಮಾಜದ ಕಟ್ಟಕಡೆಯ ಪ್ರಜೆಯನ್ನಾಗಿಯೂ ಅದರಲ್ಲೂ ಅಸ್ಪೃಶ್ಯ ಸಮುದಾಯದ ಹೆಣ್ಣನ್ನು ಅದಕ್ಕಿಂತ ಕೀಳಾಗಿ ಕಾಣುತ್ತಿದ್ದುದು ಮಲೆನಾಡಿನ ಹಿನ್ನೆಲೆಯ ಸಮಾಜದ ಚಿತ್ರಣವನ್ನು ಕುವೆಂಪು ಕಟ್ಟಿಕೊಟ್ಟಿದ್ದಾರೆ. ಕುವೆಂಪು ಹೇಳುವ ಹಾಗೆ 'ಮುಟ್ಟಾದ ಮೂರು ದಿನವಾದರೂ ಮಲೆನಾಡಿನ ಮಹಿಳೆಯರಿಗೆ ನಿವೃತ್ತಿ ಜೀವನದ ವಿರಾಮದ ಹಕ್ಕು ಇರುತ್ತದೆ' ಇನ್ನುಳಿದ ಯಾವ ಕಾಲದಲ್ಲಿಯೂ ಅವರಿಗೆ ಯಾವ ಹಕ್ಕು ಇರುವುದಿಲ್ಲ. ನಾಗತ್ತೆಯ ಸೊಸೆಯಾದ ನಾಗಕ್ಕನನ್ನು ವೆಂಕಟಪ್ಪನಾಯಕನೊಂದಿಗೆ ಅಕ್ರಮ ಸೀರುಡಿಕೆ(ಕೂಡಿಕೆ) ನಡೆಯುವ ಪ್ರಸಂಗ. ಹೆಂಡತಿ ತೀರಿಹೋಗಿ ಮುದುಕನಾಗಿದ್ದ ವೆಂಕಟಪ್ಪನಾಯಕನೊಂದಿಗೆ ನಾಗಕ್ಕನಿಗೆ ಗೊತ್ತಿಲ್ಲದಂತೆ ಸೀರುಡಿಕೆಯನ್ನು ಮಾಡಿಸುವ ಸಲುವಾಗಿ ಅವಳನ್ನು ಕೃಷಿ ಒಕ್ಕಲಿನ ನೆಪಹೇಳಿ ಹೂವಳ್ಳಿಗೆ ಕರೆದುಕೊಂಡು ಬಂದು ಅಕ್ರಮವಾಗಿ ಕೂಡಿಕೆ ಮಾಡಿಸಿ ಜಮೀನಿನ ಮೇಲೆ ಅಲ್ಲದೆ ಹೆಣ್ಣಿನ ವೈಯಕ್ತಿಕ

ಆಯ್ಕೆಯ ಸ್ವತಂತ್ರದ ಮೇಲೆ ಗಂಡಿನ ಯಜಮಾನ್ಯ ಮೆರೆದದ್ದು ದಾಖಲಾಗಿದೆ. ಹೀಗೆ ಮದುಮಗಳು ಕಾದಂಬರಿಯಲ್ಲಿ ಕುವೆಂಪುರವರು ಕೃಷಿ ಬದುಕಿನ ಒಳಗೆ ಮನುಷ್ಯ ನಿರ್ಮಿಸಿದ ಯಜಮಾನ್ಯ ಹಕ್ಕುತನವನ್ನು ಸವಿವರವಾಗಿ ಹಿಡಿದಿಟ್ಟಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಮಲೆಗಳಲ್ಲಿ ಮದುಮಗಳು – ಕುವೆಂಪು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
- ಕುವೆಂಪು ಬಿಂಬಿಸಿದ ಆರ್ಥಿಕ ನೆಲೆಗಳು – ಕೆ.ಸಿ ಚನ್ನಮ್ಮ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ. 2010
- ಆಧುನಿಕತೆ, ರಾಷ್ಟ್ರ: ಕಾರಂತ – ಕುವೆಂಪು ಕಥನ – ಡಾ. ಶ್ರೀನಿವಾಸ ಗಿಳಿಯಾರು, ಆಕೃತಿ ಆಶಯ ಪಬ್ಲಿಕೇಷನ್ಸ್, ಮಂಗಳೂರು, 2013.